## ಕನಕದಾಸರ ಚರಿತ್ರೆ



14 ಮತ್ತು 15 ನೇ ಶತಮಾನದಲ್ಲಿ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಸಾತ್ವಿಕ ರೀತಿಯ ಪ್ರತಿರೋಧವನ್ನು ತೋರಿದ ಭಕ್ತ ಕನಕದಾಸರ ಜೀವನ ವೃತ್ತಾಂತವನ್ನು ಉಬ್ಬು ಚಿತ್ರಗಳಲ್ಲಿ ಬಿಡಿಸುವ ಮೂಲಕ ಅವರ ಜೀವನದ ಮಾಹಿತಿಯನ್ನು ಗೋಪುರದ ಮಾದರಿಯಲ್ಲಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಮಾಡಿದೆ.

ಕನಕದಾಸರ ಬಾಲ್ಯ, ವಿದ್ಯಾಭ್ಯಾಸ, ಕತ್ತಿವರಸೆ, ಕುದುರೆ ಸವಾರಿ, ವಿವಾಹ, ಡಣ್ಣಾಯಕನಾಗಿ ರಾಜಭಾರ, ಯುದ್ಧದಲ್ಲಿ ಸೋಲು, ವೈರಾಗ್ಯ, ನಳಚರಿತೆ, ಮೋಹನ ತರಂಗಿಣಿ, ಹರಿಭಕ್ತಿ ಸಾರ, ರಾಮಧಾನ್ಯ ಚರಿತೆ ಇಂತಹ ಮೌಲ್ಯಯುತ ಕೃತಿಗಳ ರಚನೆಯ ಚಿತ್ರಗಳನ್ನು ಬಿಡಿಸಲಾಗಿದೆ. ಹಂಪಿಯ ಸುತ್ತಮುತ್ತಲೂ ಕಂಡುಬರುವ ಕಲ್ಲಿನ ಮಾದರಿಯನ್ನು ಹೋಲುವಂತೆ ಕಾಣುತ್ತದೆ. ಕಲ್ಲಿನಲ್ಲಿ ಕೆತ್ತದೆ ಸಿಮೆಂಟ್ ಬಳಸಿ ಆಕರ್ಷಕವಾಗಿ ನಿರ್ಮಿಸಿದ್ದಾರೆ. ಒಂದರ ಮೇಲೊಂದರಂತೆ ಒಟ್ಟು ಐದು ಗೋಪುರಗಳನ್ನು ಹೊಂದಿದ್ದು, ಸುಮಾರು ನಲವತ್ತು ಅಡಿಗಳಷ್ಟು ಎತ್ತರವಾಗಿದೆ. ಐದನೆಯ ಗೋಪುರದ ಮೇಲೆ ವೀಣೆಯನ್ನು ಚಿತ್ರಿಸಲಾಗಿದ್ದು, ಮನೋಹರವಾಗಿ ಕಂಡುಬರುತ್ತಿದೆ.

—ಮಲ್ಲಪ್ಪ ಫ. ಕರೇಣ್ಣನವರ ಮೋಟೆಬೆನ್ನೂರು

## ಸಗಣಿ ಭಕ್ಷಕ ಜೀರುಂಡೆ!



ರೈತರ ತಿಪ್ಪೆಯ ಬಳಿ ದೊಡ್ಡ ಸಗಣಿ ಉಂಡೆಗಳನ್ನು ದೂಡಿಕೊಂಡು ಹೋಗುತ್ತಿರುವ ಸಂಧಿಪದಿ ವಂಶದ ಜೀರುಂಡೆಗಳನ್ನು ಖಂಡಿತ ನೋಡಿರುತ್ತೀರಿ. ಇವೇ ಸಗಣಿ ಜೀರುಂಡೆಗಳು. ಇವನ್ನು ಡಂಗ ಬೀಟಲ್ ಎನ್ನುತ್ತಾರೆ. ಈ ಚಿತ್ರವನ್ನು ಛಾಯಾಚಿತ್ರಗ್ರಾಹಕ ಆಕಾಶ ಸೆರೆಹಿಡಿದಿದ್ದಾರೆ.

ಇವು 300 ಲಕ್ಷ ವರ್ಷಗಳಿಂದಲೂ ಅಸ್ತಿತ್ವದಲ್ಲಿವೆ ಎಂದು ಹೇಳುತ್ತಾರೆ. ಅಂಟಾರ್ಟಿಕ ಹೊರತು ಪಡಿಸಿ ಜಗತ್ತಿನ ಎಲ್ಲ ಭೂ ಖಂಡಗಳಲ್ಲಿ ಕಂಡುಬರುತ್ತವೆ. ಪ್ರಾಣಿಗಳು ವಿಸರ್ಜಿಸಿದ ಮಲ, ಕೊಳೆತ ಎಲೆಗಳೆಂದರೆ ಇವುಗಳಿಗೆ ಅಪ್ಯಾಯಮಾನ. ಇವು ಸಗಣಿಯ ಉಂಡೆಗಳನ್ನು ದೂಡಿಕೊಂಡು ಬಂದು ಮರಿಗಳಿಗೆ ಆಹಾರ ನೀಡುತ್ತವೆ. ಈ ಸಗಣಿಯಿಂದಲೇ ಗೂಡು ರಚಿಸುತ್ತವೆ. ಇದರೊಳಗೆ ಹೆಣ್ಣು ತತ್ತಿಗಳನ್ನಿಡುತ್ತದೆ. ಲಾರ್ವಾಗಳು ಹೊರಬಂದಮೇಲೆ ಈ ಗೂಡಿನೊಳಗಿರುವ ಆಹಾರವನ್ನೇ ಅವು ಪಡೆಯುತ್ತವೆ. ಇವು ತಮ್ಮ ತೂಕಕ್ಕಿಂತ 50 ಪಟ್ಟು ಹೆಚ್ಚಿನ ತೂಕದ ಸಗಣಿಯ ಉಂಡೆಯನ್ನು ತಳ್ಳಬಲ್ಲವು.

—ಪ್ರಕಾಶ ಎಸ್.ಮನ್ನಂಗಿ ಮೋಟೆಬೆನ್ನೂರು

## ಕೀಟಗಳ ವೇಷಾಂತರ ತಂತ್ರ.

ಕೀಟಗಳ ವೇಷಾಂತರ ತಂತ್ರಕ್ಕೆ ಅಲಂಕರಣ ವೇಷಾಂತರ ತಂತ್ರ Guys ಎನ್ನುತ್ತಾರೆ. ತಾನಿರುವ ಪರಿಸರದಲ್ಲಿ ಸಿಗುವ ಕಡ್ಡಿಗಳನ್ನ ಬಳಸಿಯೇ ಸ್ವಯಂ ರಕ್ಷಣೆ ಮಾಡುವ ತಂತ್ರ. ಅದಕ್ಕಾಗಿ ಎಲೆ ಕಡ್ಡಿ, ಸೊಪ್ಪಿನ ಮೇಣವನ್ನೇ ಕೀಟಗಳು ಬಳಸಿಕೊಳ್ಳುತ್ತವೆ. ಪಕ್ಕನೆ ನೋಡಿದರೆ ಎಲೆಯೇ ಬಿದ್ದಿದೆಯೇನೋ ಅನಿಸುವಂತಿದೆ ಈ ಕೀಟ. ಕೈ ತೋಟದ ಪಕ್ಕದಲ್ಲೇ ಸಿಕ್ಕಿದ ಈ ಕೀಟವನ್ನು ಕ್ಯಾಮರಾ ದಲ್ಲಿ ಸೆರೆಹಿಡಿದದ್ದು ಗೀತಾ ಮಡಿಕೇರಿಯವರು.

—ಅಶ್ವಿನಿ ಮೂರ್ತಿ ಅಯ್ಯನಕಟ್ಟೆ

